ಮೇಲೆ ಮೊಕದ್ದಮೆ ಹೂಡುತ್ತಾರೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ನಾನು ಕೇಳುತ್ತಿರುವಂತಾದ್ದು ಏನೆಂದರೆ ಕ್ಲಾಸಿಕ್ ಕಂಪ್ಯೂಟರ್ ನಿರ್ದೇಶಕರು ಆ 1 ಕೋಟಿ 25ಲಕ್ಷ ರೂಪಾಯಿಗಳನ್ನು ಅವತ್ತೇ ಡ್ರಾ ಮಾಡಿದ್ದಾರಾ? ಅವರು ಸಹಿ ಮಾಡಿದ್ದಾರಾ? ಇಷ್ಟೇ ವಿವರಗಳನ್ನು ನಾನು ಮುಖ್ಯಮಂತ್ರಿಗಳಿಂದ ಕೇಳುತ್ತಿದ್ದೇನೆ, ಬೇರೆ ಏನೂ ವಿವರಗಳನ್ನು ಕೇಳುತ್ತಿಲ್ಲ ಅವರು ಡ್ರಾ ಮಾಡಿದ್ದಾರೆಂದು ಹೇಳಿದರೆ ಸಾಕು, ಮುಂದಿನ ಕಾರ್ಯಕ್ರಮ ತಾವು ತೆಗೆದುಕೊಳ್ಳಿ ಎರಡನೆಯದು ನೀವು ಮುಖ್ಯಮಂತ್ರಿ ಆಗಿ ಒಂದೂಕಾಲು ವರ್ಷ ಆದ ಮೇಲೂ ಸಹ ಕೇವಲ ಲಾಯರ್ ನೇಮಕ ಮಾಡಿದ್ದೇನೆಂದು ಹೇಳುತ್ತಿದ್ದೀರೇ ಹೊರತು ಇದುವರೆಗೂ ಕೇಸ್ ಹಾಕಿಲ್ಲ ಎಂದು ಹೇಳುತ್ತಿದ್ದೀರಿ. ಅವರನ್ನು ಉಳಿಸಬೇಕು ಎನ್ನುವಂತಹ ಪ್ರಯತ್ನ ಏನಾದರೂ ಇದೇ ಏನು? ಅವರನ್ನು ರಕ್ಷಣೆ ಮಾಡುತ್ತಿದ್ದೀರಿ ಎಂದು ನಾನು ಆರೋಪ ಮಾಡುವುದಕ್ಕಾಗುತ್ತದೆ ಏನು? ಹೀಗಾದರೆ ಜನರು ನಾಳೆ ತಪ್ಪು ಅಭಿಪ್ರಾಯಕ್ಕೆ ತಮ್ಮ ಬಗ್ಗೆ ಬರುತ್ತಾರೋ ಇಲ್ಲವೋ? ಹಿಂದೆ ಯಾವ ಕಳಕಳಿಯಲ್ಲಿ ಸಿ.ಬಿ.ಐ. ತನಿಖೆಯನ್ನು ನೀವು ಮಾಡಿದಿರೋ ಅದೇ ಒಂದು ಕಳಕಳಿಯಲ್ಲಿ ಈ ಒಂದು ಕ್ಲಾಸಿಕ್ ಕಂಪ್ಯೂಟರ್ನ ನಿರ್ದೇಶಕನ ಬಗ್ಗೆ ಕ್ರಮ ತೆಗೆದುಕೊಳ್ಳಲು ಹಿಂದು ಮುಂದು ನೋಡುತ್ತಿರುವ ಉದ್ದೇಶ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ನಮ್ಮ ಹಿರಿಯ ಸದಸ್ಯರು ಯಡಿಯೂರಪ್ಪನವರಿಗೆ ಕೋರ್ಟ್ ವ್ಯವಹಾರಗಳೆಲ್ಲಾ ಅಂದರೆ ಸಿವಿಲ್ ಮೊಕದ್ದಮೆಗಳು ಏನಿದೆ, ಕ್ರಿಮಿನಲ್ ಮೊಕದ್ದಮೆಗಳು ಏನಿದೆ ಎಂದು ಗೊತ್ತಿದೆ. ಸಿ.ಬಿ.ಐ. ನವರು ಎಲ್ಲಾ ಕಾಗದ ಪತ್ರಗಳನ್ನು ಸೀಜ್ ಮಾಡಿಕೊಂಡು ಅವರ ಕಸ್ಟಡಿಯಲ್ಲಿಟ್ಟುಕೊಂಡಿದ್ದಾರೆ. ತಾವು ಏನು ವಿವರಗಳನ್ನು ಕೇಳುತ್ತಿದ್ದೀರಿ ಆ ವಿವರಗಳೆಲ್ಲಾ ಸಿಬಿಐನವರು ವಶ ಮಾಡಿಕೊಂಡಂತಹ ಆ ಕಾಗದ ಪತ್ರಗಳಲ್ಲಿ ಇದೆ. ಅದಕ್ಕಾಗಿಯೇ ನಮಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಸಹ ಅವರನ್ನು ಉಳಿಸುವಂತಹ ಪ್ರಯತ್ನ ಮಾಡುತ್ತಿದ್ದೀರಾ? ಕೇವಲ ಜನರಿಗೆ ತೋರಿಕೆಗೋಸ್ಕರ ಈ ಒಂದು ಸಿ.ಬಿ.ಐ. ತನಿಖೆ ನಾಟಕ ಮಾಡಿ ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದೀರಿ. ನಿಮಗೂ ಸಹ ಇವತ್ತು ಹಣಕಾಸಿನ ಸಚಿವರಾಗಿ ಹಾಗೂ ಮುಖ್ಯಮಂತ್ರಿಗಳಾಗಿ ಉತ್ತರ ಕೊಡಲಿಕ್ಕೆ ಆಗಲಿಲ್ಲ. ಈ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

ನಿಯಮ 334ರ ಮೇರೆಗೆ ಚರ್ಚೆ

(1) ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಸೌಲಭ್ಯಕ್ಕೆ ಆಡಳಿತಕ್ಕ ಅನುಮೋದನೆ ದೊರಕಿಸಿ ಕೊಡುವುದು.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ಜಿಲ್ಲಾ ಆಸ್ಪತ್ರೆ ಇದ್ದು ಈ ಜಿಲ್ಲಾ ಆಸ್ಪತ್ರೆಯು ಜಿಲ್ಲೆಯಾದ್ಯಂತ ಇರುವವರಿಗೆ ಸಾರ್ವಜನಿಕರಿಗೆ ಆರೋಗ್ಯ ಸೌಲಭ್ಯವನ್ನು ಒದಗಿಸುತ್ತಾ ಇದೆ. ಈ ಆಸ್ಪತ್ರೆಯಲ್ಲಿ ರೋಗಿಗಳ ಒತ್ತಡಕ್ಕೆ ಅನುಗುಣವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸೌಲಭ್ಯ ಹಾಗೂ ಸಲಕರಣೆಗಳನ್ನೊಳಗೊಂಡ ಅಭಿವೃದ್ಧಿ ಕಾರ್ಯಗಳು ಜರೂರಾಗಿ ಆಗಬೇಕಾಗಿದೆ. ಈ ದಿಶೆಯಲ್ಲಿ 1993-94ನೇ ಸಾಲಿನ ಆಯುವ್ಯಯದಲ್ಲಿ ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ ಕಾರ್ಯ ಸುಮಾರು 60 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸೇರ್ಪಡೆಯಾಗಿದೆ. 1993-94ನೇ ಸಾಲಿನ ಆರ್ಥಿಕ ವರ್ಷದ ಕೊನೆಯಂಚಿನಲ್ಲಿದ್ದರೂ ಸಹ ಇನ್ನೂ ಕೂಡ ಈ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯು ಸರ್ಕಾರದ

ವತಿಯಿಂದ ದೊರಕಿರುವುದಿಲ್ಲ. ಈ ಕಾರಣದಿಂದ ಜಿಲ್ಲಾಆಸ್ಪತ್ರೆಯು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗದೆ ಉತ್ತಮ ಸೌಲಭ್ಯದಿಂದ ಶ್ರೀಸಾಮಾನ್ಯ ವಂಚಿತನಾಗುವ ಪರಿಸ್ಥಿತಿ ಇದೆ. ಈ ಕಾರಣದಿಂದ ಜಿಲ್ಲಾ ಆಸ್ಪತ್ರೆ ಅಭಿವೃದ್ಧಿ ಕಾರ್ಯಕ್ಕೆ ಅಡಳಿತಾತ್ಮಕ ಮಂಜೂರಾತಿ ದೊರಕಿಸಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆ ಮಾಡುತ್ತೇನೆ.

ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ದಿಸೆಯಲ್ಲಿ, ಈಗ ಹಾಲಿ ಇರುವ ಒಳರೋಗಿಗಳ ಕಟ್ಟಡ ಮೇಲೆ ಮಹಡಿ ಕಟ್ಟಡದ ಕಾಮಗಾರಿಯ ಸಲುವಾಗಿ, ಮುಖ್ಯ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಸದರಿ ಕಾಮಗಾರಿಗೆ ರೂ. 54.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿರುವ ಮೇರೆಗೆ, ನಿರ್ದೇಶಕರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಇವರು ಅಡಳಿತಾತ್ಮಕ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಸದರಿ ಕಾಮಗಾರಿಗೆ 1993-94ನೇ ಸಾಲಿನ ಆಯವ್ಯಯದಲ್ಲಿ 14.00 ಲಕ್ಷ ರೂ.ಗಳ ಅನುದಾನವನ್ನು 4210 ವೈದ್ಯಕೀಯ ಮತ್ತು ಜನಾರೋಗ್ಯದ ಮೇಲಿನ ಬಂಡವಾಳ ವೆಚ್ಚದಡಿಯಲ್ಲಿ ಸೇರಿರುವುದಲ್ಲದೆ, ಈ ಕೆಳಕಂಡ ಎರಡು ಕೈಗೊಳ್ಳಲಾಗದ ಕಾಮಗಾರಿಗಳಿಗೆ ಅನುದಾನ ಸಹ ಆಯವ್ಯಯದಲ್ಲಿ ಸೇರಿರುತ್ತದೆ.

1. ಫಾರ್ಮಸಿ ಕಟ್ಟಡ ನಿರ್ಮಾಣ ಅಂದಾಜು ವೆಚ್ಚ 3 ಲಕ್ಷ ಅನುದಾನ 3 ಲಕ್ಷ
2. 10 ಹಾಸಿಗೆಗಳ ಡಿ. ಅಡಿಕ್ಷನ್ ಅಂದಾಜು ವೆಚ್ಚ 6 ಲಕ್ಷ ಅನುದಾನ 2 ಲಕ್ಷ

ಈ ಮೇಲಿನ ಕಾಮಗಾರಿಗಳ ಒಟ್ಟು ಅನುದಾನವನ್ನು (19.00 ಲಕ್ಷ) ಸದರಿ ಕಾಮಗಾರಿಯ $\frac{1}{3}$ ಭಾಗದ ಅನುದಾನವನ್ನಾಗಿ ಉಪಯೋಗಿಸಿಕೊಳ್ಳಲು ವರ್ಗಾಯಿಸಿ ಜಿಲ್ಲಾ ಆಸ್ಪತ್ರೆಯ ಮೊದಲನೆ ಮಹಡಿಯ ಕಟ್ಟಡ ನಿರ್ಮಾಣದ ಕಾಮಗಾರಿಯ 54.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಅಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಯೋಜನಾ ಇಲಾಖೆಗೆ ಸಹಮತಿಗಾಗಿ ಕಳುಹಿಸಿದಾಗ, ಸದರಿ ಇಲಾಖೆಯು ಕೆಲವು ಸ್ಪಷ್ಟೀಕರಣಗಳನ್ನು ಕೇಳಿ ಕಡತವನ್ನು ಹಿಂದಿರುಗಿಸಿದೆ. ಈ ಮಾಹಿತಿಗಳನ್ನು ಯೋಜನಾ ಇಲಾಖೆಗೆ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಂತರ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿ, ಆ ಇಲಾಖೆಯ ಸಹಮತಿ ದೊರಕಿದ ಕೂಡಲೇ ಅಡಳಿತಾತ್ಮಕ ಮಂಜೂರಾತಿಯನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

2. ಜಿಲ್ಲೆಯ ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡದ ನಿರ್ಮಾಣ

ಶ್ರೀ ಎ. ರುಕ್ಮಯಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೆ ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು 1993-94ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಈಗ ಮಂಡಲ ಪಂಚಾಯತಿಗೆ ಸೇರಿದ ಕಟ್ಟಡದಲ್ಲಿ ತರಗತಿಗಳು ನಡೆಯುತ್ತಾ ಇರುತ್ತವೆ. ಆದರೆ ಇನ್ನು ಮುಂದೆ ಕಾಲೇಜು ವ್ಯವಸ್ಥಿತವಾಗಿ ನಡೆಯಬೇಕಾದರೆ ಸ್ವಂತ ಕಟ್ಟಡ ಅತಿ ಅಗತ್ಯವಾಗಿ ಬೇಕಾಗಿದೆ. ಆದುದರಿಂದ 1994-95ನೇ ಬಜೆಟ್ಟಿನಲ್ಲಿ ಈ ಕಟ್ಟಡಕ್ಕೆ ಬೇಕಾದ ಹಣವನ್ನು ಸರ್ಕಾರ ಒದಗಿಸಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.